ಇದರಲ್ಲಿ (ಬೇಡಿಕೆ 12) ಅಳವಡಿಸಿದ್ದು ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿತ್ತು. ಸಂಧಾನದ ಹಲವಾರು ಬೇಡಿಕೆಗಳನ್ನು ಸರ್ಕಾರದ ಹಲವು ಹಂತಗಳಲ್ಲಿ ಚರ್ಚಿಸಿದ್ದಲ್ಲದೆ ಮಾನ್ಯ ರೇಷ್ಮೆ ಮಂತ್ರಿಗಳ ಅಧ್ಯಕ್ಷತೆಯಲ್ಲಿಯೂ ಸಹ ಚರ್ಚಿಸಲಾಯಿತು. ಈ ಸಭೆಯಲ್ಲಿ ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀ ಟಿ.ಸಿ. ಜಯಚಂದ್ರ ಇವರು ಪಾಲ್ಗೊಂಡಿದ್ದರು.

ಸಂಧಾನದ ಹಲವಾರು ಬೇಡಿಕೆಗಳನ್ನು ಸರ್ಕಾರವು ಈಗಾಗಲೇ ಒಪ್ಪಿ ಆದೇಶಿಸಿದ್ದು, ಮೇಲ್ಕಂಡ ಇತರೆ ಕೆಲಸಗಾರರ ವೇತನ ಶ್ರೇಣಿಯ ಬಗ್ಗೆ ಸರ್ಕಾರದ ವಿವಿಧ ಇಲಾಖೆಗಳ ತೀವ್ರ ಪರಿಶೀಲನೆಯಲ್ಲಿದೆ.

4) **ರಾಜ್ಯದ ಕಾರಾಗೃಹದಲ್ಲಿ 10 ರಿಂದ 13 ವರ್ಷ ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳನ್ನು ಡಾ|| ಅಂಬೇಡ್ಕರ್ ಜನ್ಮಶತಾಬ್ದಿಯಂದು ಮಾನವೀಯತೆ ದೃಷ್ಟಿಯಿಂದ ಬಿಡುಗಡೆ.**

ಶ್ರೀ ಎಚ್. ಎಂ. ರೇವಣ್ಣ (ಮಾಗಡಿ):- ಮಾನ್ಯ ಉಪಾಧ್ಯಕ್ಷರೇ, ರಾಜ್ಯದ ಕಾರಾಗೃಹದಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾಗಿರುವ ಖೈದಿಗಳು ಈಗಾಗಲೇ 10 ರಿಂದ 13 ವರ್ಷಗಳನ್ನೂ ಕಾರಾಗೃಹಗಳಲ್ಲಿ ಒಳ್ಳೆಯ ನಡತೆಯಿಂದ ಪೂರೈಸಿರುವುದರಿಂದ ಈ ವರ್ಷ ಡಾ: ಬಿ.ಆರ್. ಅಂಬೇಡ್ಕರ್ ಅವರ ಜನ್ಮಶತಾಬ್ದಿಯನ್ನು ಆಚರಿಸುವುದರಿಂದ ಈ ಖೈದಿಗಳನ್ನು ಮಾನವೀಯತೆ ದೃಷ್ಟಿಯಿಂದ ಹಾಗೂ ಸಮಾಜದಲ್ಲಿ ಅವರ ಜೀವನವನ್ನು ಹಸನುಮಾಡಿಕೊಂಡು ಬಾಳಲು ಅವರುಗಳನ್ನು ಬಿಡುಗಡೆ ಮಾಡಬೇಕೆಂಬ ಸರ್ಕಾರವನ್ನು ಕೋರುತ್ತೇನೆ. ಇದರ ಜೊತೆಗೆ ಬೆಂಗಳೂರಿನ ಕೇಂದ್ರ ಕಾರಾಗೃಹದಲ್ಲಿ ಶಿಕ್ಷೆ ಅನುಭವಿಸುತ್ತಿರುವ ಖೈದಿಗಳ ಪಟ್ಟಿಯನ್ನೂ ಕಳುಹಿಸಿಕೊಟ್ಟಿರುತ್ತೇನೆ.

ಶ್ರೀ ಡಿ. ಕೆ. ಶಿವಕುಮಾರ್ (ಬಂಧಿಖಾನೆ ಮತ್ತು ಗೃಹ ರಕ್ಷಕ ದಳದ ರಾಜ್ಯ ಸಚಿವರು):- ಮಾನ್ಯ ಉಪಾಧ್ಯಕ್ಷೀಣಿಯವರೇ,

ದಿನಾಂಕ: 15-2-1992ರಂದು ರಾಜ್ಯದ ಕೇಂದ್ರ ಕಾರಾಗೃಹಗಳಲ್ಲಿ ಜೀವಾವಧಿ ಶಿಕ್ಷೆಗೆ ಒಳಗಾದ ಖೈದಿಗಳು 10 ವರ್ಷದ ಮೇಲ್ಪಟ್ಟು ಜೈಲು ಶಿಕ್ಷೆಯನ್ನು ಅನುಭವಿಸುತ್ತಿರುವವರು 234 ಮಂದಿ ಇದ್ದಾರೆ. ಈ ಪೈಕಿ 228 ಪುರುಷ ಖೈದಿ ಮತ್ತು 6 ಮಹಿಳಾ ಖೈದಿಗಳು.

ದಿನಾಂಕ: 18-12-1978ರ ಹಿಂದೆ ಶಿಕ್ಷೆಯಾದ ಜೀವಾವಧಿ ಬಂಧಿಗಳನ್ನು ವಿಚಾರಣಾ ಅವಧಿಯು ಸೇರಿ 10 ವರ್ಷ ಸಜೆ ತೀರಿದ ನಂತರ ಅವರ ಒಳ್ಳೆಯ ನಡತೆ, ಪ್ರಾಮಾಣಿಕತೆ ಸುಧಾರಣಾ ಮನೋಭಾವನೆಗಳನ್ನು ಪರಿಗಣಿಸಿ ಹಾಗೂ ಸಲಹಾ ಮಂಡಳಿಯಿಂದ ಶಿಫಾರಸ್ಸಾಗಿ ಬಂದ ಬಂಧಿಗಳನ್ನು ಸರ್ಕಾರವು ಬಿಡುಗಡೆ ಮಾಡುತ್ತಿತ್ತು. ಆದರೆ ದಂಡ ಪ್ರಕ್ರಿಯೆ ಸಂಹಿತೆ 433(ಎ)ಗೆ ದಿನಾಂಕ: 18-12-1978ರಂದು ಕೇಂದ್ರ ಸರ್ಕಾರವು ತಿದ್ದುಪಡಿ ಮಾಡಿದ ನಂತರ, ಜೀವಾವಧಿ ಶಿಕ್ಷೆ ಅನುಭವಿಸುತ್ತಿರುವ ಬಂಧಿಗಳನ್ನು ವಿಚಾರಣಾ ಅವಧಿಯು ಸೇರಿ 14 ವರ್ಷ ಸಜೆ ತೀರಿದ ನಂತರ ಮಾತ್ರ ಬಿಡುಗಡೆಗೆ ಪರಿಶೀಲನೆ ಮಾಡಬೇಕಾಗುತ್ತದೆ. ಇತ್ತೀಚೆಗೆ ಡಾ: ಬಿ.ಆರ್. ಅಂಬೇಡ್ಕರ್ ಅವರ ಜನ್ಮ ಶತಾಬ್ದಿಯ ಅಂಗವಾಗಿ ರಾಜ್ಯ ಸರ್ಕಾರವು ದಿನಾಂಕ: 18-12-1978ರ ಹಿಂದೆ ಜೀವಾವಧಿ ಶಿಕ್ಷೆಗೆ ಒಳಗಾದ ಎಲ್ಲಾ ಹೆಣ್ಣೊಂದು ಬಂಧಿಗಳನ್ನು ಬಿಡುಗಡೆ ಮಾಡಲಾಗಿದೆ. ಇದಲ್ಲದೆ ಜೀವಾವಧಿ ಶಿಕ್ಷೆಗೆ ಒಳಗಾದ ವಿಚಾರಣಾ ಅವಧಿಯು ಸೇರಿ ೧೦ ವರ್ಷ ಸಜೆ ಮುಗಿಸಿದ ನಂತರ ಬಿಡುಗಡೆ ಮಾಡಲು ಅನುಕೂಲವಾಗುವಂತೆ ಸರ್ಕಾರವು ದಂಡ ಪ್ರಕ್ರಿಯೆ ಸಂಹಿತೆ 433(ಎ) ನಿಯಮಕ್ಕೆ ತಿದ್ದುಪಡಿ ಮಾಡುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದ್ದು, ಪ್ರಸ್ತುತ ಇದನ್ನು ಕಾನೂನು ಇಲಾಖೆಯ ಪರಿಶೀಲನಾ ಸಮಿತಿಯು ಪರಿಶೀಲಿಸುತ್ತಿದೆ.

5) ಸಿಂಧಗಿ ತಾಲ್ಲೂಕಿನ ಕುಮಸಿ ಗ್ರಾಮದ ಸೇವಾ ಸಹಕಾರಿ ಸಂಘದಲ್ಲಿ ಕಾರ್ಯದರ್ಶಿಯವರಿಂದ ಅವ್ಯವಹಾರ.

ಶ್ರೀ ಆರ್. ಬಿ. ಚೌಧರಿ (ಸಿಂಧಗಿ):- ಮಾನ್ಯ ಉಪಾಧ್ಯಕ್ಷೀಣಿಯವರೇ, ಸಿಂಧಗಿ ತಾಲ್ಲೂಕಿನ ಕುಮಸಿ ಗ್ರಾಮದ ಸೇವಾ ಸಹಕಾರಿ ಸಂಘಕ್ಕೆ ಚುನಾವಣೆ ನಿಯಮದ ಪ್ರಕಾರ 27.2.90 ರಂದು ಜರುಗಿದ ಸರ್ವಸದಸ್ಯರ ಮಹಾಸಭೆಯಲ್ಲಿ ಆಡಳಿತ ಮಂಡಳಿ ಚುನಾಯಿತವಾಯಿತು. ಆದರ ಕಾರ್ಯದರ್ಶಿ ಶ್ರೀ ಬಿರಾದಾರ ಇವರು ಹಾಜರಾಗದೇ ಆಡಳಿತ ಸದಸ್ಯರುಗಳ ಸಭೆ ಜರುಗಿತು. ಶ್ರೀ ಬಿರಾದಾರ್ ಹಾಗೂ ಚೇರಮನ್ ಶ್ರೀ ಎಸ್.ಎಸ್. ಪಾಟೀಲ್ ಇಬ್ಬರೂ ಶಾಮೀಲಾಗಿ 90,000-00 ರೂ. ಹಣ ದುರುಪಯೋಗವಲ್ಲದೇ ಇನ್ನಿತರ ಅವ್ಯವಹಾರ ಕೂಡ ಮಾಡಿದ್ದಾರೆ. ಆದ್ದರಿಂದ ಕಾರ್ಯದರ್ಶಿಯು ಇದನ್ನು ಮುಚ್ಚಿಕೊಳ್ಳಲು ಚುನಾವಣೆ ನಡೆಯಲ್ಲವೆಂದು ಪೊಟ್ಟಿ ವರದಿ ಮಾಡಿ ಕರ್ನಾಟಕ ಸಹಕಾರಿ ಸಂಘಗಳ ನಿಯಮ 18ಎ8ರ ಪ್ರಕಾರ ಅಪರಾಧಿಯಾಗಿದ್ದಾನೆ. ಇವನನ್ನು 15 ದಿವಸದೊಳಗೆ ಚೇರಮನ್‌ರ ಅಯ್ಕೆಗಾಗಿ ಸಭೆ ಕರೆಯುವಂತೆ ಕರ್ನಾಟಕ ಸಹಕಾರಿ ಸಂಘಗಳ 190() ನಿಯಮ